**ಪಿ. ಡಬ್ಲ್ಯೂಃ 1**

**(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 19-03-2025)**

**ಮುಖ್ಯ ವಿಚಾರಣೆ : ವಾದಿ ಪರ ಶ್ರೀ ಜೆ ಡಿ ಬಿ ವಕೀಲರಿಂದ,**

ನಾನು ಈ ದಾವೆಯಲ್ಲಿ 1 ನೇ ವಾದಿ ಇದ್ದು, ನನ್ನ ಮತ್ತು ಇತರ ವಾದಿಗಳ ಪರವಾಗಿ ಸಾಕ್ಷಿ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಾನು ಓದಿ ನೋಡಿ ಸಹಿ ಮಾಡಿರುತ್ತೇನೆ. ಅದರಲ್ಲಿ ಬರೆದ ಎಲ್ಲಾ ವಿಷಯಗಳು ನಿಜ ಇರುತ್ತವೆ .

ದಾವಾ ಆಸ್ತಿಗೆ ಸಂಬಂಧಿಸಿದಂತೆ ದಾವಾ ಆಸ್ತಿಯ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು, 2ನೇ ಪ್ರತಿವಾದಿಯವರು ನನ್ನ ಮೃತ ಸಹೋದರ ಅಶೋಕ ಹರಿ ಮಹಾಲಯ ರವರಿಗೆ ದಿನಾಂಕ 13.09.2011 ರಂದು ಕಳುಹಿಸಿದ ನೋಟಿಸಿನ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-2 ಎಂದು, ಸದ್ರಿ ನೋಟಿಸಿಗೆ ನನ್ನ ಸಹೋದರ ನೀಡಿದ ಉತ್ತರದ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-3 ಎಂದು, 2 ನೇ ಪ್ರತಿವಾದಿಯವರು ತನ್ನ ವಕೀಲರ ಮೂಲಕ ನನಗೆ ಮತ್ತು ನನ್ನ ಇತರ ಸಹೋದರರಿಗೆ ಕಳುಹಿಸಿದ ನೋಟಿಸಿನ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-4 ಎಂದು, ಸದ್ರಿ ನೋಟಿಸಿಗೆ ನಮ್ಮ ವಕೀಲರ ಮೂಲಕ ನೀಡಿದ ಉತ್ತರದ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-5 ಎಂದು, 2 ನೇ ಪ್ರತಿವಾದಿಯವರು ದಾವಾ ಆಸ್ತಿಯನ್ನು 1 ನೇ ಪ್ರತಿವಾದಿಗೆ ಮಾರಾಟ ಮಾಡಿರುವುದಕ್ಕೆ ಸಂಬಂಧಿಸಿದಂತೆ ದಿನಾಂಕ 11.12.2013 ರ ಕ್ರಯಪತ್ರದ ಯಥಾ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-6 ಎಂದು, ದಾವಾ ಆಸ್ತಿಗೆ ಸಂಬಂಧಿಸಿದಂತೆ ಸೂಸಗಡಿ ಗ್ರಾಮದ ಮ್ಯುಟೆಶನ್ ಎಂಟ್ರಿ ಸಂಖ್ಯೆ ಹೆಚ್ 133 ರ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-7 ಎಂದು, ದಾವಾ ಆಸ್ತಿಗೆ ಸಂಬಂಧಿಸಿದಂತೆ ಒಂದು ಫೋಟೊ ಹಾಜರುಪಡಿಸಿದ್ದು ಅದನ್ನು ಸಾಕ್ಷ್ಯ ಅಧಿನಿಯಮದ ಕಲಂ 65 ಬಿ ಯ ಅನ್ವಯಕ್ಕೊಳಪುಟ್ಟು ಅದನ್ನು ನಿಪಿ-8 ಎಂದು ಗುರುತಿಸಲಾಯಿತು. ಆದ್ದರಿಂದ ದಾವೆಯಲ್ಲಿ ಕೇಳಿದಂತೆ ಡಿಕ್ರಿಯಾಗಬೇಕೆಂದು ಕೋರುತ್ತೇನೆ.

**ಪಾಟೀ ಸವಾಲು ಮಾಡಲು 2 ನೇ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ, ಭಟ್ಕಳ**